ಕೊಂಡು ನಾಲಗೆಯಿಂದ ಕೊಂಚ ಅದುಮಿದರೆ ಸಾಕು, ತನ್ನ ರಸವನ್ನು ಬಿಟ್ಟುಕೊಡುತ್ತದೆ. ಅಂತಹ ಶೈಲಿ ದ್ರಾಕ್ಷಾಪಾಕ. ಬಾಳೆಹಣ್ಣು ಅಷ್ಟು ಸರಳವಲ್ಲ. ಸಿಪ್ಪೆ ಸುಲಿದು, ಮುರಿದು ಬಾಯಿಗಿಟ್ಟು, ಅಣಲುಗಳಲ್ಲಿ ಅತ್ತಿತ್ತ ನಾಲ್ಕಾರು ಬಾರಿ ಅಲುಗಾಡಿಸಬೇಕು. ಅದು ಕದಲೀಪಾಕ ಶೈಲಿ. ತೆಂಗಿನಕಾಯಿ ಇವೆರಡಕ್ಕಿಂತಲೂ ಭಿನ್ನ. ಅದಕ್ಕೆ ಮೇಲಿನ ಸಿಪ್ಪೆ, ಒಳಗಿನ ಕರಟ ಮುಂತಾದುವೆಲ್ಲ ಉಂಟು. ಅವೆಲ್ಲವನ್ನೂ ಭೇದಿಸಿ ಹೊಕ್ಕಮೇಲೂ ಕರಟದಿಂದ ತಿರುಳನ್ನು ಬೇರ್ಪಡಿಸುವುದೇನೂ ಸುಲಭವಲ್ಲ. ಆಮೇಲೆ ರಸಾಸ್ವಾದನವಾಗಬೇಕಾದರೆ ನಿಧಾನವಾಗಿ ಜಗಿಜಗಿದು ತಿನ್ನಬೇಕು. ಭಾಗವತದ ಶೈಲಿ ಅಂತಹ ನಾರಿಕೇಳ ಪಾಕ, ಗೌಡೀ ಮಾರ್ಗ. ಕಠಿಣವಾದ ಪದಾವಳಿಗಳಿಂದಲೂ, ಹಲವಾರು ವೈದಿಕ ಸಂಸ್ಕೃತದ ಶಬ್ದ ಪ್ರಯೋಗದಿಂದಲೂ, ಕ್ಲಿಷ್ಟವಾದ ಸಂಧಿಸಮಾಸಗಳಿಂದಲೂ, ಅಧ್ಯಾಹಾರ-ದೂರಾನ್ವಯಗಳಿಂದಲೂ ಅದು ಎಂತಹ ವಿದ್ವಾಂಸರನ್ನಾದರೂ ಹಿಡಿದು ನಿಲ್ಲಿಸುತ್ತದೆ. ಇವನು ವಿದ್ವಾಂಸನೋ ಅಲ್ಲವೋ ಎಂಬುದನ್ನು ಪರೀಕ್ಷಿಸಲು ಹಿಂದೆ ಭಾಗವತವೊಂದು ಒರೆಗಲ್ಲಾಗಿತ್ತಂತೆ. ಅದಕ್ಕೆಂದೇ 'ವಿದ್ಯಾವತಾಂ ಭಾಗವತೇ ಪರೀಕ್ಷಾ' ಎಂಬ ನುಡಿಗಟ್ಟೊಂದು ಪ್ರಚುರವಾಗಿದೆ. ಈ ಪುರಾಣದಲ್ಲಿ ಶಬ್ದಾರ್ಥಗಳನ್ನು ಬಿಡಿಸುವ ಕಠಿಣತೆಯ ಜೊತೆಗೆ ಗೂಢಾರ್ಥಗಳನ್ನೂ ರಹಸ್ಯಗಳನ್ನೂ ಉದ್ಘಾಟಿಸುವ ಕಷ್ಟವೂ ಹೆಣೆದುಕೊಂಡಿದೆ. ಈ ಎಲ್ಲ ಕ್ಲೇಶಗಳನ್ನೂ ಗೆದ್ದು ಒಳಹೊಕ್ಕಾಗ ಅಲ್ಲಿ ದರ್ಶನವಾಗುವ ತತ್ತ್ವಾಲೋಕ ಮಾತ್ರ ಅನುಪಮವಾದುದು. ಆದುದರಿಂದಲೆ 'ಗರುಡಪುರಾಣ'ವು ಭಾಗವತವನ್ನು ಹೀಗೆ ಕೊಂಡಾಡಿದೆ : ಭಾಗವತವು 'ಬ್ರಹ್ಮಸೂತ್ರ'ಗಳೆಂಬ ವೇದಾಂತಸೂತ್ರಗಳ ಅರ್ಥವನ್ನು ತಿಳಿಸುತ್ತದೆ. ಮಹಾಭಾರತದ ಕಗ್ಗಂಟುಗಳನ್ನು ಸುಲಭವಾಗಿ ಬಿಡಿಸಲು ಸಹಕಾರಿಯಾಗಿದೆ. ಗಾಯತ್ರಿ ಮಹಾಮಂತ್ರಕ್ಕೆ ಬರೆದ ಭಾಷ್ಯದಂತಿದೆ. ವೇದಗಳ ರಹಸ್ಯವನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿದೆ :

> ಅರ್ಥೋಽಯಂ ಬ್ರಹ್ಮಸೂತ್ರಾಣಾಂ
> ಭಾರತಾರ್ಥವಿನಿರ್ಣಯಃ।
> ಗಾಯತ್ರೀ ಭಾಷ್ಯರೂಪೋಽಸೌ
> ವೇದಾರ್ಥ ಪರಿಬೃಂಹಿತಃ ॥

ವೈಷ್ಣವ ಸಂಪ್ರದಾಯದ ಅತ್ಯಂತ ಪ್ರಧಾನ ಶಾಸ್ತ್ರಗ್ರಂಥವಾದ ಭಾಗವತವು ಅನೇಕ ಉಪಾಖ್ಯಾನಗಳಿಂದ ಕೂಡಿದೆ. ಆದರೆ ಇದರ ಪ್ರಧಾನ ಕಥಾವಸ್ತು ಶ್ರೀಕೃಷ್ಣನ ಲೀಲೆ. ಭಾಗವತವೆಂಬ ತಾವರೆಯಲ್ಲಿ ಮಕರಂದದಂತಿರುವ ಶ್ರೀಕೃಷ್ಣ ಲೀಲಾಕಥಾಮೃತ ಪಾನ ಮಾಡಲು ಭಕುತ ಭೃಂಗಗಳು ಯಾವಾಗಲೂ ಮುತ್ತುತ್ತಿರುವುವು.

# ಸಾಧನೆಯಲ್ಲಿ ಸುಖಿ

## [ಏಕಾಂಕ ನಾಟಕ]

—ಹೆಚ್.ವಿ.ಸರೋಜ

**ಶ್ರೀರಾಮಕೃಷ್ಣರು ಹೇಳಿದ ಒಂದು ಕಥೆಯನ್ನು ನಾಟಕ ರೂಪಕ್ಕೆ ಅಳವಡಿಸಿ ಆಧ್ಯಾತ್ಮಿಕ ಸಾಧನೆಯ ಹಿಂದೆ ಎಂಥ ಭಾವವಿರಬೇಕು ಎಂಬುದನ್ನು ಸ್ವಾರಸ್ಯಕರವಾಗಿ ಚಿತ್ರಿಸಿರುವ ಶ್ರೀಮತಿ ಹೆಚ್.ವಿ. ಸರೋಜ ಅವರು ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರು.**

### ದೃಶ್ಯ-೧

*[ಒಬ್ಬ ವ್ಯಕ್ತಿ ಒಂದು ಹುಣಸೇ ಮರದಡಿ ಕುಳಿತು ತಪಸ್ಸು ಮಾಡುತ್ತಿದ್ದಾನೆ. ಅವನ ಹೆಸರು ರಾಮು. ಅಲ್ಲಿಗೆ ನಾರದರು ಹಾಡುತ್ತ ಬರುತ್ತಾರೆ.]*

ನಾರದರು : ಓ, ಯಾರಿದು? ತಪಸ್ಸು ಮಾಡುತ್ತಿರುವಂತಿದೆ.

[ಹತ್ತಿರ ಬಂದು ಕಿವಿಯಲ್ಲಿ, ಓಂ ನಮೋ ನಾರಾಯಣಾಯ.]


ರಾಮು [ಸ್ವಗತ] : ಆಹಾ! ಯಾರದೀ ಧ್ವನಿ? ನನ್ನ ತಪಸ್ಸಿಗೆ ಮೆಚ್ಚಿ ಪರಮಾತ್ಮನೇ ದರ್ಶನ ಕೊಡುತ್ತಿರಬಹುದು. ಅಂತೂ ಇಷ್ಟು ದಿನಗಳಿಂದ ಮಾಡಿದ ತಪಸ್ಸು ಸಿದ್ಧಿಯಾಗಿರಬೇಕು. ಆಗಿರಬೇಕು ಏನು? ಆಗಿಯೇ ಇದೆ. ಎಷ್ಟು ವರ್ಷಗಳಿಂದ ಒಂದೇ ಸಮನೆ ತಪಸ್ಸು ಮಾಡಿದ್ದೇನೆ. ನನಗಲ್ಲದೆ ಮತ್ತಾರಿಗೆ ತಪಸ್ಸಿದ್ಧಿಯಾದೀತು? ಅಬ್ಬಾ ಅಂತೂ ಮುಗಿಯಿತಲ್ಲ ಕಠಿಣ ಸಾಧನೆ. ಇನ್ನು ದೇವರು ಒಲಿದು ಬಂದಿರುವಾಗ, ಈ ಕ್ಷಣ ನನಗೆ ಮುಕ್ತಿ ಕೊಡು ಎಂದು ಬೇಡಿಕೊಂಡು, ಈ ಕೋಟಲೆಗಳಿಂದ ಪಾರಾಗಿಬಿಡುತ್ತೇನೆ.

ನಾರದರು [ಸ್ವಗತ] : ಓಹೋ, ಇವನ ಆಲೋಚನೆ ಹೀಗಿದೆಯೇ? ತಾನೇ ಶ್ರಮ ಪಟ್ಟು, ಯಾರೂ ಮಾಡದಷ್ಟು ಕಾಲ ಸಾಧನೆ ಮಾಡಿದ್ದೇನೆ ಎಂದುಕೊಳ್ಳುತ್ತಿದ್ದಾನಲ್ಲ! ಸಾಧನೆ ಮಾಡುವುದು ದೇವರ ಕೃಪೆ ಇದ್ದರೆ ಮಾತ್ರ ಸಾಧ್ಯ ಎನ್ನುವ ಭಾವನೆಯೇ ಇವನಿಗೆ ಇದ್ದಂತಿಲ್ಲ. ಅದೂ ಅಲ್ಲದೆ ಈ ತಪಸ್ಸು ಮುಗಿದರೆ ಸಾಕು ಎಂದುಕೊಳ್ಳುತ್ತಿದ್ದಾನಲ್ಲ! ತಪಸ್ಸನ್ನು ಮಾಡುವಾಗ ಅದರಲ್ಲಿ ಒಂದು ಆನಂದವನ್ನು ಕಾಣುತ್ತಿರಬೇಕು. ಮುಗಿದರೆ ಸಾಕಪ್ಪ ಎನ್ನುವಂತಹ ಕಾಟಾಚಾರದ ತಪಸ್ಸು, ಧ್ಯಾನ, ಜಪಗಳಿಂದ ಏನು ಸಾಧ್ಯ? ಅದು ಹೇಗೆ ದೇವರಿಗೆ ಪ್ರಿಯವಾದೀತು?..... ಏನಾದರಾಗಲಿ, ಈ ಮನುಷ್ಯನಿಗೆ ನಾನು ಮಾಡುತ್ತಿದ್ದೇನೆ ಎಂಬ ಅಹಂಭಾವವನ್ನು ಬಿಡಿಸಿ, ನಿಜವಾದ ಸಾಧನೆಯಿಂದ ಬರುವ ಶಾಂತಿ, ತೃಪ್ತಿ, ಆನಂದಗಳನ್ನು ಈತ ಅರಿಯುವಂತೆ ಮಾಡಬೇಕು. ಇರಲಿ. ಈಗ ಈತ ಏನು ಹೇಳುತ್ತಾನೆಯೋ ಕೇಳುತ್ತೇನೆ.

ರಾಮು : ಓಹೋ! ಈತ ನಾರದ ಮುನಿ ಇದ್ದಂತೆ ಕಾಣುತ್ತಿದೆಯಲ್ಲ! (ಮುಂದೆ ಬಂದು) ಮಹಾಮುನಿಗಳಿಗೆ ಪ್ರಣಾಮಗಳು.

ನಾರದ : ಏಳು, ಮಗು, ಏಕಿಷ್ಟು ಕೃಶನಾಗಿರುವೆ?

ರಾಮು : ಅಯ್ಯೋ, ನನ್ನ ಅವಸ್ಥೆಯನ್ನು ಏನೆಂದು ಹೇಳಲಿ, ಮುನಿಗಳೆ! ಎಷ್ಟೋ ಕಾಲದಿಂದ ಈ ರೀತಿ ಒಂದೇ ಸಮನೆ ಈ ಜಾಗದಲ್ಲಿ



ಇದೇನು? ಈತ, ಇಷ್ಟು ಗಾಢವಾಗಿ ಧ್ಯಾನ ಮಾಡುತ್ತಿದ್ದಾನೆ. (ಆತನನ್ನು ಅಲುಗಾಡಿಸುತ್ತಾರೆ. ಮತ್ತೆ ಮತ್ತೆ ಕಿವಿಯಲ್ಲಿ ಮಂತ್ರ ಹೇಳುತ್ತಾರೆ.)

ಶ್ಯಾಮ : ಹಾ ! ಯಾರಿದು? (ಕಣ್ಣು ಉಜ್ಜಿಕೊಂಡು) ಓ, ನಾರದ ಮಹರ್ಷಿಗಳಿದ್ದಂತಿದೆ. ಮಹನೀಯರೆ, ತಮಗೆ ವಂದಿಸುತ್ತೇನೆ. ತಾವು ನಾರದ ಮಹರ್ಷಿಗಳಲ್ಲವೆ?

ನಾರದರು : ಹೌದು ಮಗು.

ಶ್ಯಾಮ : ಪೂಜ್ಯರೇ, ತಮ್ಮ ದರ್ಶನದಿಂದ ಧನ್ಯನಾದೆ. ತಾವೀ ಕಡೆ ಬಂದ ಕಾರ್ಯವೇನೆಂದು ಕೇಳಬಹುದೇ?

ನಾರದರು : ಅದನ್ನು ಹೇಳುತ್ತೇನೆ ಮಗು. ಆದರೆ ನೀನು ಏತಕ್ಕಾಗಿ ಈ ತಪಸ್ಸನ್ನಾಚರಿಸುತ್ತಿದ್ದೀಯೆ?

ಶ್ಯಾಮ : ಮಹಾತ್ಮರೆ, ಈ ಪ್ರಾಪಂಚಿಕ ಕೋಟಲೆಗಳಿಂದ, ಸಂಸಾರ ಬಂಧನದಿಂದ ಪಾರಾಗಿ, ಶ್ರೀಹರಿಯನ್ನು ಸೇರಿ ಮುಕ್ತಿ ಪಡೆಯಲೆಂದು ಈ ಸಾಧನೆಯನ್ನು ಪ್ರಾರಂಭಿಸಿದ್ದೇನೆ.

ನಾರದರು : ನೀನು ಈ ಕಾರ್ಯದಲ್ಲಿ ಬಹಳ ವರ್ಷಗಳಿಂದ ತೊಡಗಿರಬೇಕಲ್ಲವೆ?

ಶ್ಯಾಮ : ವರ್ಷಗಳು, ಅನೇಕವು ಉರುಳಿ ಹೋಗಿರಬಹುದು ಮುನಿಗಳೆ, ಆದರೆ ನನಗೆ ಅದರ ಪರಿವೆಯೇ ಇಲ್ಲ.

ನಾರದರು : ನಿನಗೆ ಈ ರೀತಿ ತಪಸ್ಸನ್ನಾಚರಿಸಿ ಬಹಳ ಶ್ರಮವಾಗಿರಬೇಕಲ್ಲವೆ?

ಶ್ಯಾಮ : ಏನು? ತಪಸ್ಸಾಧನೆ ಎನ್ನುವುದು ಶ್ರಮದ ಕೆಲಸವೆ? ಅದು ಶ್ರೀಹರಿ ಸ್ಮರಣೆಯಲ್ಲವೆ? ಅವನಂತೆಯೇ, ಅವನ ರೂಪ, ಗುಣ ಧ್ಯಾನದಲ್ಲಿ ಮೈಮರೆತೆವೆಂದರೆ ಕಾಲ, ಶ್ರಮಗಳ ಪರಿವೆ ಇರಲು ಹೇಗೆ ಸಾಧ್ಯ?

ನಾರದರು: ಧನ್ಯ ಮಗು, ನೀನು. ನಿನ್ನ ಸಾಧನೆ ನಿಜವಾದ ಸಾಧನೆ. ವಿಷ್ಣುವು ನಿನ್ನಲ್ಲಿ ಖಂಡಿತ ಬೇಗನೆ ಸುಪ್ರೀತನಾಗುತ್ತಾನೆ. ಅಂದ ಹಾಗೆ ನಾನು ಈಗ ಶ್ರೀವಿಷ್ಣುವಿನ ದರ್ಶನ ಮಾಡಲು ವೈಕುಂಠಕ್ಕೆ ಹೋಗುತ್ತಿದ್ದೇನೆ. ಅವನಲ್ಲಿ ನಿನ್ನದೇನಾದರೂ, ಬಿನ್ನಹವಿದ್ದರೆ ಹೇಳು. ಕೇಳಿ ಬಂದು ನಿನಗೆ ತಿಳಿಸುತ್ತೇನೆ.

ಶ್ಯಾಮ : ಏನು! ತಾವು ಶ್ರೀಹರಿದರ್ಶನಾರ್ಥವಾಗಿ ಹೋಗುತ್ತಿದ್ದೀರಾ? ಎಂತಹ ಭಾಗ್ಯ ತಮ್ಮದು. ಅವನ ದರ್ಶನಕ್ಕೆಂದು ಹೊರಟ ನಿಮ್ಮ ದರ್ಶನವೇ ನನ್ನ ಭಾಗ್ಯ. ನನಗೆ ಮತ್ತಿನ್ನೇನು ಬೇಕು.

ನಾರದರು : ಅದಿರಲಿ, ಮಗು, ಶ್ರೀವಿಷ್ಣುವಿನಲ್ಲಿ ನಿನ್ನ ಪರವಾಗಿ ನಾನೇನು ಹೇಳಲಿ ಹೇಳು. ನಾನು ಸಂತೋಷದಿಂದ ಆ ಕಾರ್ಯ ಮಾಡುತ್ತೇನೆ.

ಶ್ಯಾಮ : ಪೂಜ್ಯರು ತಾವು. ಈ ದೀನನಲ್ಲಿ ಎಂತಹ ಕೃಪೆ ತಮ್ಮದು. ನನ್ನ ಪರವಾಗಿ ತಾವು ದೇವರನ್ನು ಕೇಳುತ್ತೇನೆ ಎಂದು ಹೇಳುತ್ತಿರುವಾಗ, ನನ್ನದೊಂದು ಬಿನ್ನಹವನ್ನು ತಿಳಿಸಿಬಿಡುತ್ತೇನೆ. ದಯವಿಟ್ಟು ನನಗೆ ಮುಕ್ತಿ ಯಾವಾಗ ಎಂದು ತಿಳಿದು ಬಂದು ಹೇಳುವ ಕೃಪೆ ಮಾಡುತ್ತೀರಾ?

ಕುಳಿತು ತಪಸ್ಸು ಮಾಡುತ್ತಿದ್ದೇನೆ. ಆದರೂ ಆ ವಿಷ್ಣುವಿಗೆ ನನ್ನ ಮೇಲೆ ಇನ್ನೂ ಕರುಣೆ ಬಂದಿಲ್ಲ. ನೀವು ಬಂದು ನನ್ನ ಕಿವಿಯಲ್ಲಿ, ಮಂತ್ರೋಚ್ಚಾರಣೆ ಮಾಡಿದಾಗ, ನಾನು ಆತನೇ ಪ್ರತ್ಯಕ್ಷನಾದನೇನೊ ಎಂದು ಓಗ್ಗಿದೆ. ಆದರೆ ಹಾಗಾಗಿಲ್ಲ.

ನಾರದ : ಅಯ್ಯೋ, ಪಾಪ. ನಿನಗೆ ಈ ರೀತಿ ನಿರಾಶೆ ಆಯಿತೆ? ನಾನು ನಾರದ. ಈ ಮಾರ್ಗವಾಗಿ ವೈಕುಂಠಕ್ಕೆ ಹೋಗುತ್ತಿದ್ದೇನೆ.

ರಾಮ : ಹೌದೇ, ನೀವು ವೈಕುಂಠಕ್ಕೆ ಸ್ವಾಮಿ ದರ್ಶನಕ್ಕಾಗಿ ಹೋಗುತ್ತಿದ್ದೀರಾ? ಹಾಗಾದರೆ ದಯವಿಟ್ಟು ನನಗೆ ಇನ್ನೆಷ್ಟು ಕಾಲಕ್ಕೆ ಮುಕ್ತಿ ಸಿಗುತ್ತದೆ ಎಂಬುದನ್ನು ಆತನನ್ನು ಕೇಳಿ ತಿಳಿದುಕೊಂಡು ಬನ್ನಿ.

ನಾರದ : ಖಂಡಿತ ತಿಳಿದುಕೊಂಡು ಬರುತ್ತೇನೆ.

ರಾಮ : ಕೃತಾರ್ಥನಾದೆ ಸ್ವಾಮಿ. ನಿಮ್ಮ ಬರುವಿಗಾಗಿಯೇ ನಾನು ಚಾತಕ ಪಕ್ಷಿಯಂತೆ ಕಾಯುತ್ತಿರುತ್ತೇನೆ. ಇಗೋ ಪ್ರಣಾಮಗಳು.

ನಾರದ : ಶುಭಮಸ್ತು. ಹೋಗಿ ಬರುತ್ತೇನೆ.
(ಹಾಡುತ್ತ ಹೋಗುವರು.)

### ದೃಶ್ಯ-೨


*[ನಾರದರು ಹಾಡುತ್ತ ಬರುತ್ತಿದ್ದಾರೆ. ಅಲ್ಲೊಬ್ಬ ವ್ಯಕ್ತಿ ಇನ್ನೊಂದು ಹುಣಸೇ ಮರದ ಕೆಳಗೆ ಕುಳಿತು ತಪಸ್ಸು ಮಾಡುತ್ತಿದ್ದಾನೆ.]*

ನಾರದ [ಸ್ವಗತ] : ಓಹೋ! ಇಲ್ಲಿ ಇನ್ನೊಬ್ಬ ವ್ಯಕ್ತಿ ಅವನಂತೆಯೇ ತಪಸ್ಸನ್ನು ಮಾಡುತ್ತಿದ್ದಾನಲ್ಲ. ಇವನನ್ನು ಎಬ್ಬಿಸಿ ಮಾತನಾಡಿಸಿ ಹೋಗೋಣ. (ಅವನ ಕಿವಿಯಲ್ಲಿ ಓಂ ನಮೋ ನಾರಾಯಣಾಯ ಎಂದು ಹೇಳುವರು.)

ನಾರದರು : ಸಂತೋಷದಿಂದ ಮಾಡುತ್ತೇನೆ, ಮಗು. ನನಗಾಗಿ ಇಲ್ಲಿಯೇ ಕಾದಿರು. ವೈಕುಂಠದಿಂದ ಈ ಮಾರ್ಗವಾಗಿಯೇ ಬರುತ್ತೇನೆ.

ಶ್ಯಾಮ : ಅಪ್ಪಣೆ, ಅಂತೆಯೆ ಮಾಡುತ್ತೇನೆ. (ನಮಸ್ಕರಿಸುವನು. ನಾರದರು ಹಾಡುತ್ತ ಹೋಗುವರು.)

ದೃಶ್ಯ-೩



ರಾಮ : ಅಗೋ, ನಾರದರು ಬರುತ್ತಿರುವಂತಿದೆ. ಅವರದೇ ಆ ಹಾಡಿನ ಧ್ವನಿ. ಅಬ್ಬ, ಎಷ್ಟು ಕಾತರತೆಯಿಂದ ಕಾದಿದ್ದಾಯಿತು. ಅಂತೂ, ಬಂದರಲ್ಲ, ಇನ್ನು ನನ್ನ ಬಿಡುಗಡೆ ಯಾವತ್ತೆಂದು ತಿಳಿದುಕೊಳ್ಳಬಹುದು. ಇಷ್ಟು ವರ್ಷಗಳಿಂದ ತಪಸ್ಸು ಮಾಡುತ್ತಿದ್ದೇನೆ. ಇನ್ನೂ ವಿಷ್ಣುವಿಗೆ ನನ್ನ ಮೇಲೆ ಕನಿಕರ ಬರುವುದಿಲ್ಲವೆ? ಬಂದೇ ಬರುತ್ತದೆ. ಪ್ರಾಯಶಃ, ಇದೇ ನನ್ನ ಕಡೆಯ ಜನ್ಮ ಇರಬಹುದು. ಈ ಜನ್ಮದಲ್ಲಿಯೆ ನನಗೆ ಮುಕ್ತಿ ಸಿಕ್ಕೇ ಸಿಗುತ್ತದೆ.

ರಾಮ: ನಾರದರೆ, ನಾರದರೆ, ಏನಾಯಿತು, ನೀವು ಹೋದ ಕಾರ್ಯ? ಎಂದಿಗೆ ನನಗೆ ಮುಕ್ತಿ?

ನಾರದರು : ಅಪ್ಪ, ಶಾಂತಿ, ಶಾಂತಿ. ಸ್ವಲ್ಪ ತಡೆ. ಅಷ್ಟು ಅವಸರ ಮಾಡಬೇಡ. ನಿನ್ನ ಮುಂದೆ ನಿಂತಿರುವ ನನಗೆ ನಮಸ್ಕರಿಸುವಷ್ಟು ವ್ಯವಧಾನವಿಲ್ಲವೇ ನಿನಗೆ? ಅಷ್ಟು ಅವಸರವೇ ಆ ಉತ್ತರ ಪಡೆಯಲು?

ರಾಮ : ಕ್ಷಮಿಸಿ ನಾರದರೆ. ನನ್ನ ಕಾತರತೆಯಲ್ಲಿ, ನಾನು ತಮಗೆ ಗೌರವ ತೋರಿಸುವುದನ್ನು ಮರೆತೆ. ಇಗೋ ಪ್ರಣಾಮಗಳು. (ನಮಸ್ಕರಿಸುವನು.)

ರಾಮ : ಈಗಾದರೂ ಬೇಗ ಹೇಳಿ, ಶ್ರೀವಿಷ್ಣು ಏನು ಹೇಳಿದ?

ನಾರದ : ನೀನು ಈ ಮರದ ಕೆಳಗೆ ಅಲ್ಲವೇ, ಅಂದಿನಿಂದ ತಪಸ್ಸನ್ನಾಚರಿಸುತ್ತಿರುವುದು?

ರಾಮ : ಹೌದು, ಮಹಾಸ್ವಾಮಿ (ಕೈ, ಕೈ ಹಿಸುಕಿಕೊಳ್ಳುವನು).

ನಾರದ : ಇದು ತುಂಬ ದೊಡ್ಡ ಮರ.

ರಾಮ : ಹೌದು, ಇದು ಬೃಹದಾಕಾರವಾಗಿ ಬೆಳೆದಿರುವ ಮರ.

ನಾರದ : ಈ ಮರ, ಕೊಂಬೆಗಳೂ ಕಾಣದಂತೆ, ಬುಡದಿಂದ ತುದಿಯವರೆಗೆ ಎಲೆಗಳಿಂದ ತುಂಬಿದೆಯಲ್ಲವೇ?

ರಾಮ : ಹೌದು, ಸ್ವಾಮಿ, ಹೌದು, ಆದರೆ ನನ್ನ ಪ್ರಶ್ನೆಗೆ ತಮ್ಮ ಉತ್ತರ ಏನು ಹೇಳಿ.

ನಾರದರು : ಇರು, ಸ್ವಲ್ಪ ಇರು. ಅಲ್ಲಿಗೇ ಬರುತ್ತಿದ್ದೇನೆ. ಮರೆತಿಲ್ಲ. ಈ ಎಲೆಗಳು ಎಷ್ಟು ಚಿಕ್ಕದಾಗಿವೆಯಲ್ಲವೇ?

ರಾಮ : ಅಯ್ಯೋ ಸ್ವಾಮಿ, ಇದೇನು ನಿಮ್ಮ ವರ್ತನೆ. ನನ್ನ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದೀರಾ?

ನಾರದರು : ಇಲ್ಲಪ್ಪ, ಇದೆಲ್ಲಾ ನಿನ್ನ ಪ್ರಶ್ನೆಯ ಉತ್ತರಕ್ಕೆ ಸಂಬಂಧಪಟ್ಟಿದ್ದೇ.

ರಾಮ : ಅಂದರೆ ಈ ಎಲೆಗಳಿಗೂ, ನನ್ನ ಮುಕ್ತಿಗೂ ಏನು ಸಂಬಂಧ?

ನಾರದರು : ಇದೆ, ಇದೆ, ಸಂಬಂಧ ಇದೆ. ಸುಮಾರು ಎಷ್ಟು ಎಲೆಗಳಿರ ಬಹುದು ಈ ಮರದಲ್ಲಿ?

ರಾಮ : ಸರೀ ಹೋಯಿತು, ಈ ನಿಮ್ಮ ಅಸಂಬದ್ಧ ಪ್ರಶ್ನೆಗಳಿಗೆ ಕೊನೆಯೇ ಇಲ್ಲವೆ?

ನಾರದರು : ಇದೆ, ಇದೆ, ಹೇಳು. ಎಷ್ಟು ಎಲೆಗಳಿರಬಹುದು ಮರದಲ್ಲಿ?

ರಾಮ : ನಾರದರೆ, ಇದೇನು ಎಣಿಸಲು ಸಾಧ್ಯವೆ? ಇರಬಹುದು ಕೋಟ್ಯನುಕೋಟಿ. ಈ ಎಲೆಗಳ ಸಂಖ್ಯೆಗೂ ನನ್ನ ತಪಸ್ಸಿಗೂ ಏನು ಸಂಬಂಧ?

ನಾರದರು : ನಿನ್ನ ತಪಸ್ಸಿಗೂ ಎಲೆಗಳಿಗೂ ಸಂಬಂಧವಿಲ್ಲದೆ ಇರಬಹುದು. ಆದರೆ ಅದಕ್ಕೂ ಈ ಮರದ ಕೊಂಬೆಗಳಿಗೂ ಸಂಬಂಧ ಉಂಟು.

ರಾಮ : ಸರಿ, ಸರಿ, ನೀವೆ ಇಲ್ಲೊಂದು ನಾಟಕ ಪ್ರಾರಂಭಿಸಿದ್ದೀರಿ. ಎಲ್ಲೋ ವೈಕುಂಠಕ್ಕೆ ತಮಗೆ ಹೋಗಲು ಆಗಿಲ್ಲವೆಂದು ಕಾಣುತ್ತದೆ ಅಥವಾ ಶ್ರೀವಿಷ್ಣುವೇ ತಮಗೆ ದರ್ಶನ ಕೊಡಲು ನಿರಾಕರಿಸಿದನೋ! ಏನೋ ಸಮಾಚಾರ ಇರಬೇಕು. ಅದಕ್ಕೇ ಇಷ್ಟು ಸುತ್ತಿ ಬಳಸಿ ಮಾತನಾಡುತ್ತಿದ್ದೀರ.

ನಾರದರು : ಇಲ್ಲ, ಮಗು ಕೇಳು. ವೈಕುಂಠಕ್ಕೂ ಹೋದೆ, ಶ್ರೀವಿಷ್ಣುವು ಆತನ ಕೃಪೆಯಿಂದ ತನ್ನ ದರ್ಶನವನ್ನೂ ಕೊಟ್ಟ. ನಿನ್ನ ಪ್ರಶ್ನೆಯನ್ನೂ ಕೇಳಿದೆ.

ರಾಮ : ಶ್ರೀವಿಷ್ಣುವಿನ ಉತ್ತರವೇನು?

ನಾರದರು : ಆತ ಹೇಳಿದ, ನೋಡು ರಾಮನಿಗೆ ಹೇಳು, ಆತ ಕುಳಿತು ತಪಸ್ಸು ಮಾಡುತ್ತಿರುವ ಹುಣಸೇ ಮರದಲ್ಲಿ ಎಷ್ಟು ಕೊಂಬೆಗಳಿವೆಯೋ, ಅಷ್ಟು ಜನ್ಮ ಆತ ತಪಸ್ಸು ಮಾಡಿದರೆ, ಆತನ ತಪಸ್ಸಿದ್ಧಿಯಾಗಿ ಮುಕ್ತಿ ಸಿಗುತ್ತದೆ ಎಂದು.

ರಾಮ : ಆ್ಞ! ಏನು, ಈ ಮರದಲ್ಲಿ ನಾಲ್ಕು ಕೊಂಬೆಗಳಿವೆ ! ಅಷ್ಟು ಜನ್ಮ ತಪಸ್ಸನ್ನಾಚರಿಸಬೇಕೆ? ಅಯ್ಯೋ, ದೇವ, ನೀನೆಷ್ಟು ನಿಷ್ಕರುಣಿ. ಇಷ್ಟು ಕಾಲ ನಿನ್ನ ತಪಸ್ಸನ್ನಾಚರಿಸಿದರೂ, ನಿನಗಿನ್ನೂ ಸಾಲದೆ? ನನ್ನ ಗತಿಯೇನು? ಅಷ್ಟು ಕಾಲ ನಾನು ಸಾಧನೆ ಮಾಡಬಲ್ಲೆನೆ? (ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳುವನು.)

ನಾರದರು : ಏಳು, ಮಗು, ನಿರಾಶನಾಗಬೇಡ. ನೋಡು, ಸಾಧನೆಯನ್ನು ಸಂತೋಷದಿಂದ, ಆನಂದದಿಂದ ಶ್ರೀಹರಿಯ ಸಾಮೀಪ್ಯವನ್ನು ಕಲ್ಪಿಸಿಕೊಂಡು ಮಾಡು. ಆಗ ಒಂದೊಂದು ಜನ್ಮವೂ ಒಂದೊಂದು ನಿಮಿಷದಂತೆ ಕಳೆದು, ಬೇಗ, ನಿನ್ನ ಜನ್ಮಗಳು ಕೊನೆಗೊಂಡು ನೀನು ಮುಕ್ತಿ ಪಡೆಯುವೆ.

ರಾಮ : ಇದು ಯಾರಿಂದಲೂ ಸಾಧ್ಯವಿಲ್ಲ, ನಾರದರೆ. ಅಷ್ಟು ಕಾಲ ತಪಸ್ಸನ್ನಾಚರಿಸಲು ಯಾರಿಂದಲೂ ಆಗದು. ಇದನ್ನು ಕೇಳಿದ ಯಾವ ಮನುಷ್ಯನಾದರೂ ತಪಸ್ಸನ್ನೇ ಕೈಬಿಡುತ್ತಾನೆ.

ನಾರದರು : ಹಾಗೆನ್ನಬೇಡ. ನಿಜವಾದ ದೈವಭಕ್ತರು, ದೇವರು ಎಷ್ಟು ಜನ್ಮಗಳನ್ನು ಕೊಟ್ಟರೂ, ಸಂತೋಷವಾಗಿ ಸ್ವೀಕರಿಸಿ ಸಾಧನೆಯನ್ನು ಕೈಗೊಂಡು ಕೃತಾರ್ಥರಾಗುತ್ತಾರೆ.

ರಾಮ : ಅವೆಲ್ಲ ಬರೀ ಮಾತು.

ನಾರದರು : ನನ್ನ ಮಾತಿನಲ್ಲಿ ನಂಬಿಕೆ ಇಲ್ಲದಿದ್ದರೆ, ನಿನಗೆ ನಿಜವಾದ ಸಾಧಕನೊಬ್ಬನನ್ನು ತೋರಿಸುತ್ತೇನೆ, ಬಾ. ನೀನೆ ನನ್ನ ಮಾತಿನ ನಿಜವನ್ನು ಪ್ರತ್ಯಕ್ಷವಾಗಿ ನೋಡುವಿಯಂತೆ.

ದೃಶ್ಯ-೪

[*ನಾರದರು ಮತ್ತು ರಾಮ ಇಬ್ಬರೂ ಶ್ಯಾಮನು ಕುಳಿತಿರುವ ಹುಣಸೇ ಮರದ ಹತ್ತಿರ ಬರುತ್ತಾರೆ. ಶ್ಯಾಮ ಹಾಡುತ್ತ, ಕುಣಿಯುತ್ತ ಬಹಳ ಆನಂದದಲ್ಲಿದ್ದಾನೆ.*]

ನಾರದರು : ಏನು, ಮಗು, ಇಷ್ಟು ಆನಂದದಲ್ಲಿದ್ದೀಯೆ?

ಶ್ಯಾಮ : ಓಹೋ! ನಾರದ ಮಹರ್ಷಿಗಳು. ಎಷ್ಟು ಬೇಗ ದೇವರ ದರ್ಶನ ಮಾಡಿ ಬಂದುಬಿಟ್ಟಿರಲ್ಲ.

ನಾರದರು : ಏನು, ನಾನು ಬೇಗ ಬಂದೆ ಎನ್ನುವೆಯಾ? ಯಾವ ಕಾಲ ಆಯಿತು ನಾನು ಇಲ್ಲಿಂದ ಹೋಗಿ!

ಶ್ಯಾಮ : ನೋಡಿ, ಮಹರ್ಷಿಗಳೆ, ನೀವು ವೈಕುಂಠಕ್ಕೆ ಹೋಗಿ ದೇವರ ದರ್ಶನ ಮಾಡಿ, ನನ್ನ ಪರವಾಗಿ ಮಾತನಾಡುತ್ತೇನೆ ಎಂದು ಹೇಳಿದಂದಿನಿಂದ ನನ್ನ ಮನ ಹರ್ಷದಿಂದ ತುಂಬಿ ಗಂಟೆಗಳು ನಿಮಿಷಗಳಾಗಿ ಕಳೆದುಹೋಗುತ್ತಿವೆ. ಅಯ್ಯೋ, ನನ್ನ ಆನಂದದಲ್ಲಿ ನಿಮಗೆ ವಂದಿಸದೆ ಅಪಚಾರಮಾಡಿದೆನಲ್ಲ, ಕ್ಷಮಿಸಿ, ಇಗೋ ಸ್ವೀಕರಿಸಿ ನನ್ನ ಪ್ರಣಾಮಗಳನ್ನು (ವಂದಿಸುವನು).

ನಾರದರು : ಹರಿ ಓಂ. ಹರಿ ಓಂ. ಮಗು ಶ್ರೀಹರಿ ನಿನ್ನ ಪ್ರಶ್ನೆಗೆ ಏನು ಉತ್ತರಿಸಿದನೆಂದು ಕೇಳಲು ನಿನಗೆ ಕಾತರತೆ ಇಲ್ಲವೆ?

ಶ್ಯಾಮ : ನನ್ನ ಹರಿ, ನನ್ನ ತಂದೆ, ನನಗೆ ಎಂದಾದರೂ ಮುಕ್ತಿ ಕೊಟ್ಟೇಕೊಡುತ್ತಾನೆ. ಆದ್ದರಿಂದ ಅದರಲ್ಲೇನೂ ನನಗೆ ಆತುರವಿಲ್ಲ. ಆದರೆ ತಾವು ಏನನ್ನಾದರೂ ಕೇಳು, ಶ್ರೀವಿಷ್ಣುವಿನಲ್ಲಿ ವಿಚಾರಿಸಿ ಹೇಳುತ್ತೇನೆ, ಎಂದಿರಲ್ಲ, ಆದ್ದರಿಂದ ಹೇಳಿದೆ. ಹೇಳಿ, ನಮ್ಮ ಹರಿ ನನ್ನ ವಿಚಾರ ಏನು ಹೇಳಿದ?

ನಾರದರು : ನೋಡಪ್ಪ, ಈ ಮರ ಎಷ್ಟು ದೊಡ್ಡದಾಗಿದೆ ಅಲ್ಲವೆ?

ಶ್ಯಾಮ : ಹೌದು.

ನಾರದರು : ಅದರಲ್ಲಿ ಕೋಟ್ಯಂತರ ಎಲೆಗಳಿಲ್ಲವೆ?

ಶ್ಯಾಮ : ಇವೆ.

ನಾರದರು : ಆ ಎಲೆಗಳ ಸಂಖ್ಯೆಯಷ್ಟು ಜನ್ಮಗಳನ್ನು ನೀನು ಸಾಧನೆಯಲ್ಲಿ ಕಳೆದಮೇಲೆ, ನಿನಗೆ ಸಾಕ್ಷಾತ್ಕಾರವಾಗುತ್ತದೆ ಎಂದು ಶ್ರೀಹರಿ ಹೇಳಿದ.

ಶ್ಯಾಮ : ಆಹಾ! ಏನು ಕರುಣೆ! ಏನು ಕೃಪೆ! ಏನು ವಿಶ್ವಾಸ! ಏನು ಪ್ರೀತಿ ಆ ನನ್ನ ತಂದೆಗೆ ನನ್ನ ಮೇಲೆ!

ನಾರದರು : ಏನು, ಇಷ್ಟು ವರ್ಷಗಳಿಂದ, ಏಕಾಗ್ರತೆಯಿಂದ ಸಾಧನೆ ಮಾಡುತ್ತಿರುವ ನಿನಗೆ ಇನ್ನೂ ಕೋಟ್ಯಂತರ ಜನ್ಮಗಳಾದಮೇಲೆ ಮುಕ್ತಿ ಎಂದರೆ, ನೀನು ದೇವರ ಕೃಪೆ, ಕರುಣೆ ಅನ್ನುತ್ತೀಯಲ್ಲ, ಅದು ಹೇಗೆ?

ಶ್ಯಾಮ : ಇದೇನು, ನಾರದರೆ, ಸದಾ ದೇವರ ಸ್ಮರಣೆಯಲ್ಲಿರುವ ನೀವೇ ಹೀಗೆ ಹೇಳುತ್ತೀರ? ಆತ ನನಗೆ ಸಾಧನೆ ಮಾಡಲು ಅಷ್ಟು ಜನ್ಮ ಕೊಡುತ್ತಾನೆ ಅಂದರೆ, ಎಷ್ಟೋ ಆನಂದ ಅನುಭವಿಸಬಹುದು ಮತ್ತೆ ಕೊನೆಯಲ್ಲಿ ಮುಕ್ತಿ ಸಿಕ್ಕೇ ಸಿಗುತ್ತದೆ, ಎಂಬುದು ಖಚಿತ ಎಂದಮೇಲೆ ಎಂತಹ ನಿರಾಲೋಚನೆಯಿಂದ, ಭರವಸೆಯಿಂದ ಸಾಧನೆ ನಡೆಸಬಹುದು. ಇಷ್ಟಕ್ಕಿಂತ ಇನ್ನೇನು ಭಾಗ್ಯ ಬೇಕು ನಾರದರೆ? (ಮತ್ತೆ ಹಾಡುತ್ತ ಕುಣಿಯತೊಡಗುವನು).

ನಾರದರು (ರಾಮನನ್ನು ಕುರಿತು) : ನೋಡಿದ್ಯಾಪ್ಪ, ನಾಲ್ಕು ಜನ್ಮಗಳ ನಂತರ ನಿನಗೆ ಮುಕ್ತಿ ಎಂದು ಶ್ರೀಹರಿಯ ಉತ್ತರ ಕೇಳಿ ನೀನು ಎಷ್ಟೊಂದು ನಿರಾಶನಾದೆ! ಆದರೆ ಕೋಟ್ಯನುಕೋಟಿ ಜನ್ಮಗಳ ನಂತರ ನಿನಗೆ ಮುಕ್ತಿ ದೊರೆಯುತ್ತದೆ ಎಂದು ಕೇಳಿದಾಕ್ಷಣ ಇವನು ಹೇಗೆ ಆನಂದವನ್ನು ಅನುಭವಿಸುತ್ತಿರುವನು ನೋಡಿದೆಯಾ!

[*ಅಶರೀರವಾಣಿ : ಶ್ಯಾಮನಿಗೆ ಈ ಕ್ಷಣವೇ ಮುಕ್ತಿ ದೊರಕಿದೆ. ಆವನು ಕೋಟಿ ಜನ್ಮಗಳನ್ನು ತಳೆಯಬೇಕಿಲ್ಲ.*]

ರಾಮ, ನಾರದರು : ಹಾ!

ನಾರದರು : ಧನ್ಯ ಶ್ಯಾಮ ಧನ್ಯ ನೀನು, ಸಾಧಕರಿಗೆಲ್ಲಾ ನೀನೆ ಮಾರ್ಗದರ್ಶಕ.

ರಾಮ : ಇದರಿಂದ ನಾನು ಒಂದು ಪಾಠ ಕಲಿತೆ ನಾರದರೆ, ಸಾಧನೆಯ ಕಾಲದಲ್ಲಿ ತಾಳ್ಮೆಯಿಂದ ಆನಂದದಿಂದ ಸಾಧನೆಯನ್ನು ಮಾಡಿದರೆ, ಭಗವಂತ ಸುಪ್ರೀತನಾಗುತ್ತಾನೆ ಎಂದು. ಇಂದಿನಿಂದ ನಾನು ಅದೇ ರೀತಿ ಸಾಧನೆ ಮಾಡುತ್ತೇನೆ.

ನಾರದ : ಹಾಗೆಯೇ ಮಾಡು, ಮಗು. ನಿನಗೆ ಶುಭವಾಗಲಿ.

ಹರಿ ಓಂ, ಹರಿ ಓಂ.

[ಮೂವರೂ ಕೈಮುಗಿದು ತಲೆಬಾಗಿ ನಮಸ್ಕರಿಸುವರು.]